4003/5031/6011/7011

I Semester 3 Year LL.B./II Semester 5 Year B.A.LL.B. (Maj.-Min. System)/ B.B.A.LL.B./B.Com.LL.B. Examination, March/April 2023 (Dec. 2022)
LAW OF TORTS

Duration : 3 Hours Max. Marks : 80

Instructions : 1. Answer all five Units.
2. One essay type question and short note/problems is compulsory from each Unit.
3. Figures to the right indicate marks.
4. Answer should be written either in English or Kannada completely.

UNIT – I

Q. No. 1. (a) "Every injury imports damage but every damage is not injury". Discuss the statement in the light of decided cases. Marks : 10

"ಪ್ರತಿಯೊಂದು ನಷ್ಟವು ಹಾನಿಯನ್ನು ವ್ಯಕ್ತಪಡಿಸುತ್ತದೆ ಆದರೆ ಪ್ರತಿಯೊಂದು ಹಾನಿಯು ನಷ್ಟವನ್ನು ವ್ಯಕ್ತಪಡಿಸುವುದಿಲ್ಲ". ಈ ಹೇಳಿಕೆಯನ್ನು ಪ್ರಮುಖ ಪ್ರಕರಣಗಳ ಸಹಾಯದಿಂದ ಚರ್ಚಿಸಿ.

OR/ಅಥವಾ

(a) Trace the development of Law of Torts in England and India.

ಇಂಗ್ಲೆಂಡ್ ಮತ್ತು ಭಾರತದಲ್ಲಿನ ಅಪಕೃತ್ಯದ ಕಾನೂನಿನ ಬೆಳವಣಿಗೆಯನ್ನು ಗುರುತಿಸಿ.

(b) Write a short note on the following. Marks : 6

ಈ ಕೆಳಗಿನವುಗಳಿಗೆ ಲಘು ಟಿಪ್ಪಣಿ ಬರೆಯಿರಿ.

Torts and crime.

ಅಪಕೃತ್ಯ ಮತ್ತು ಅಪರಾಧ.

OR/ಅಥವಾ

Torts and breach of contract.

ಅಪಕೃತ್ಯ ಮತ್ತು ಒಪ್ಪಂದದ ಚ್ಯುತಿ.

LIBRARY
BMS COLLEGE OF LAW
Bull Temple Road, Basavanagudi,
Bengaluru - 560 019.

P.T.O.

UNIT – II

Q. No. 2. (a) Explain the defences available to defendant under the Tort. Marks : 10

ಪ್ರತಿವಾದಿಯು ಮಾಡಿದ ಅಪಕೃತ್ಯಕ್ಕೆ ಇರುವ ಪ್ರತಿರಕ್ಷಣೆಗಳನ್ನು ವಿವರಿಸಿರಿ.

OR/ಅಥವಾ

(a) How to determine the relationship between master and servant ? Explain.

ಮಾಲೀಕ ಮತ್ತು ಸೇವಕನ ನಡುವಿನ ಸಂಬಂಧವನ್ನು ಹೇಗೆ ನಿರ್ಧರಿಸಬಹುದು ? ವಿವರಿಸಿ.

(b) Mr. A let out his crane and his driver Mr. B to the Mr. C under a contract providing that the Mr. B (driver) shall be the servant of Mr. C. The crane driver Mr. B by negligent injured a person Mr. X. Discuss the tortious liability of the driver Mr. B, Mr. A owner of the crane and employer Mr. C. Marks : 6

ಮಿ. A ಎಂಬುವವನು ತನ್ನ ಕ್ರೇನನ್ನು ಹಾಗೂ ಚಾಲಕ ಮಿ. B ಎಂಬುವವನನ್ನು ಮಿ. C ಎಂಬುವವನಿಗೆ ಕೊಡುವಾಗ ಕ್ರೇನ್ ಚಾಲಕನು ಮಿ. C ಯ ಸೇವಕನಾಗಿರಬೇಕೆಂಬ ಕರಾರಿನ ಮೇಲೆ ಬಾಡಿಗೆ ಕೊಡುತ್ತಾನೆ. ಕ್ರೇನಿನ ಚಾಲಕನಾದ ಮಿ. B ಯ ನಿರ್ಲಕ್ಷದಿಂದ ಮಿ. X ಎಂಬ ವ್ಯಕ್ತಿಯು ಕ್ಷತಿಗೊಳ್ಳುತ್ತಾನೆ. ಚಾಲಕನಾದ ಮಿ. B, ಕ್ರೇನಿನ ಮಾಲೀಕನಾದ ಮಿ. A ಮತ್ತು ಮಿ. C ಯ ಅಪಕೃತ್ಯ ಬಾಧ್ಯತೆಗಳನ್ನು ವಿವರಿಸಿ.

OR/ಅಥವಾ

(b) A passenger bus, which belonged to the defendant company, had been parked after the day's work. The conductor of the bus, in the absence of the driver and without his consent started driving the bus in the neighbouring streets. While driving he injured the plaintiff by his negligence. Decide.

ಪ್ರತಿವಾದಿಗೆ ಸೇರಿದ ಪ್ರಯಾಣಿಕರ ಬಸ್ ಒಂದನ್ನು ಕೆಲಸದ ನಂತರ ನಿಲ್ಲಿಸಲಾಗಿತ್ತು. ಬಸ್ಸಿನ ಕಂಡೆಕ್ಟರ್ ಚಾಲಕನ ಗೈರುಹಾಜರಿಯಲ್ಲಿ ಅವನ ಒಪ್ಪಿಗೆ ಇಲ್ಲದೆಯೇ ನೆರೆಹೊರೆಯ ದಾರಿಗಳಲ್ಲಿ ಬಸ್ಸನ್ನು ಓಡಿಸಲು ಪ್ರಾರಂಭಿಸಿದನು. ಹೀಗೆ ಓಡಿಸುತ್ತಿರುವ ಸಮಯದಲ್ಲಿ ತನ್ನ ನಿರ್ಲಕ್ಷತೆಯಿಂದ ವಾದಿಯನ್ನು ಗಾಯಗೊಳಿಸಿದನು. ನಿರ್ಧರಿಸಿ.

UNIT – III

Q. No. 3. (a) Explain the concept of strict liability and state the exceptions. Marks : 10

ಕಟ್ಟುನಿಟ್ಟಾದ ಹೊಣೆಗಾರಿಕೆಯ ಪರಿಕಲ್ಪನೆಯನ್ನು ವಿವರಿಸಿ ಮತ್ತು ಅದಕ್ಕಿರುವ ಅಪವಾದಗಳನ್ನು ತಿಳಿಸಿ.

OR/ಅಥವಾ

(a) "In jure non remota causa sed proxima spectator". Explain the maxim with the help of leading cases.

''ಇನ್ ಜೂ ನಾನ್ ರಿಮೋಟಾ ಸೆಡ್ ಪ್ರಾಕ್ಸಿಮಾ ಸ್ಪೆಕ್ಟೇಟರ್''. ಈ ನಿಯಮವನ್ನು ಪ್ರಮುಖ ತೀರ್ಪುಗಳ ಸಹಾಯದಿಂದ ವಿವರಿಸಿ.

(b) Mr. Ramesh had placed a cup-board on the window while his house was being white washed. Unfortunately, while white washing the painter slipped and while trying to save himself, he touched the cup-board which fell down outside and injured Mr. Kulkarni, a passer-by. Is Mr. Ramesh liable for Mr. Kulkarni's damage ? Marks : 6

ಮಿ. ರಮೇಶ್ ಎಂಬುವರು ತಮ್ಮ ಮನೆಗೆ ಸುಣ್ಣವನ್ನು ಬಳಿಯುವ ಸಮಯದಲ್ಲಿ ಅಲಮಾರವನ್ನು ಕಿಟಕಿಯಲ್ಲಿಟ್ಟಿದ್ದರು. ಸುಣ್ಣ ಬಳಿಯುವ ಸಮಯದಲ್ಲಿ ಸುಣ್ಣ ಬಳಿಯುವ ಕೆಲಸಗಾರ ಆಕಸ್ಮಾತಾಗಿ ಜಾರಿ ತನ್ನ ರಕ್ಷಣೆಗಾಗಿ ಕಿಟಕಿಯಲ್ಲಿ ಅಲಮಾರವನ್ನು ಮುಟ್ಟಿದಾಗ, ಅದು ಹೊರಗಡೆ ಬಿದ್ದು ಕುಲಕರ್ಣಿ ಎಂಬ ದಾರಿಹೋಕನಿಗೆ ಗಾಯವಾಯಿತು. ಮಿ. ಕುಲಕರ್ಣಿಗೆ ಆದ ಹಾನಿಗೆ ಮಿ. ರಮೇಶ್ ಹೊಣೆಗಾರನೆ ?

OR/ಅಥವಾ

(b) The defendants chartered the plaintiff's ship, the "Polemis" to carry a cargo of Benzene and Petrol. Some of the petrol cases leaked and there was petrol vapour in the hold. While shifting some cargo at a port, due to negligence of the employees, a plank fell into the hold causing a spark which resulted in fire and the ship was destroyed. Discuss the liability of the defendants.

''ಪೊಲೆಮಸ್'' ಎಂಬ ಹಡಗನ್ನು ವಾದಿಯು ಪ್ರತಿವಾದಿಗೆ ಪೆಟ್ರೋಲಿಯಂ ಸರಕನ್ನು ಸಾಗಿಸಲು ಬಾಡಿಗೆ ಕರಾರಿನ ಮೇಲೆ ಕೊಡುತ್ತಾನೆ. ಕೆಲವು ಪೆಟ್ಟಿಗೆಗಳಿಂದ ಪೆಟ್ರೋಲು ಸೋರಿದ್ದರಿಂದ ಹಡಗಿನಲ್ಲಿ ಪೆಟ್ರೋಲು ಆವಿ ಶೇಖರವಾಗಿತ್ತು. ಒಂದು ಬಂದರಿನಲ್ಲಿ ಕೆಲವು ಸರಕುಗಳನ್ನು ಸಾಗಿಸುತ್ತಿರುವಾಗ ಕೆಲಸಗಾರರ ನಿರ್ಲಕ್ಷತೆಯಿಂದ ಹಲಗೆಯು ಬೀಳಲು ಕಿಡಿಕಾರಿ ಬೆಂಕಿ ಹೊತ್ತಿಕೊಂಡಿದ್ದರಿಂದ ಇಡೀ ಹಡಗು ನಾಶವಾಯಿತು. ಪ್ರತಿವಾದಿಯ ಬಾಧ್ಯತೆಯನ್ನು ಚರ್ಚಿಸಿ.

UNIT – IV

Q. No. 4. (a) Define Malicious prosecution. What are the essential ingredients to be proved to make the defendant liable ? Discuss with cases. Marks : 10

ದುರುದ್ದೇಶಪೂರಿತ ಅಭಿಯೋಗವನ್ನು ವ್ಯಾಖ್ಯಾನಿಸಿ. ಪ್ರತಿವಾದಿಯನ್ನು ಹೊಣೆಗಾರನನ್ನಾಗಿ ಮಾಡಲು ರುಜುವಾತು ಮಾಡಬೇಕಾದ ಅವಶ್ಯಕವಾದ ಅಂಶಗಳಾವುವು ? ತೀರ್ಪುಗಳೊಂದಿಗೆ ಚರ್ಚಿಸಿ.

OR/ಅಥವಾ

(a) What is conspiracy ? What should be proved in an action for conspiracy ? Refer to decided cases.
ಒಳಸಂಚು ಎಂದರೇನು ? ಒಳಸಂಚಿನ ದಾವೆಯಲ್ಲಿ ಏನನ್ನು ರುಜುವಾತು ಮಾಡಬೇಕು ? ಪ್ರಕರಣಗಳೊಂದಿಗೆ ಉಲ್ಲೇಖಿಸಿ.

(b) The defendant wrote a letter to a virtuous woman using very abusive words to her. He enclosed it in an envelop properly fastened and posted it to her. Does this amount to defamation ? Marks : 6
ಪ್ರತಿವಾದಿಯು ಒರ್ವ ಕುಲೀನ ಸ್ತ್ರೀಗೆ ಕೆಟ್ಟ ಶಬ್ದಗಳನ್ನು ಉಪಯೋಗಿಸಿ ಪತ್ರವನ್ನು ಬರೆಯುವನು. ಅದನ್ನು ಸರಿಯಾದ ಕವರಿನಲ್ಲಿ ಹಾಕಿ ಅಂಟಿಸಿ ಆಕೆಗೆ ಅಂಚೆಯಲ್ಲಿ ಕಳಿಸುವನು. ಇದು ಮಾನಹಾನಿಯಾಗಬಹುದೇ ?

OR/ಅಥವಾ

(b) Write a short note on 'Inducing for the breach of contract'.
'ಕರಾರು ಉಲ್ಲಂಘನೆಗೆ ಪ್ರೇರೇಪಿಸುವುದು' ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

UNIT – V

Q. No. 5. (a) Discuss briefly the rights of consumers. Marks : 10
ಗ್ರಾಹಕರ ಹಕ್ಕುಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

OR/ಅಥವಾ

(a) State the salient features of Motor Vehicles Act, 1988.
1988 ಮೋಟಾರು ವಾಹನ ಅಧಿನಿಯಮಗಳ ಪ್ರಮುಖ ವೈಶಿಷ್ಟ್ಯತೆಗಳನ್ನು ತಿಳಿಸಿ.

(b) Write a short notes on : Marks : 6
ಲಘು ಟಿಪ್ಪಣಿ ಬರೆಯಿರಿ :
Defective goods.
ಸರಕಿನಲ್ಲಿ ನ್ಯೂನತೆ.

OR/ಅಥವಾ

(b) National Consumer Commission.
ರಾಷ್ಟ್ರೀಯ ಗ್ರಾಹಕರ ಆಯೋಗ.